**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.</u>**

**<u>ಸಿ.ಸಿ.ನಂ.493/2026</u>**

**<u>ಪಿರ್ಯಾದಿ</u>** : ಕರ್ನಾಟಕ ಸರ್ಕಾರ,
ಪೊನ್ನಂಪೇಟೆ ಪೋಲೀಸ್,

**ವಿರುದ್ಧ**

**<u>ಆರೋಪಿ:</u>** ಶ್ರೀ ಜಯಶೀಲನ್ ಸಿ,
ತಂದೆಃ ಚಿನ್ನಸ್ವಾಮಿ,
ಪ್ರಾಯಃ 23 ವರ್ಷ,
ವಾಸಃ ರೆಂಟ್ ಹೌಸ್ ಆಫ್ ವೇಣು ಕುಪ್ಪಂಡ,
ಗೋಣಿಕೊಪ್ಪ, ಕೊಡಗು.

**<u>ಆರೋಪಣೆ</u>**

*ಶ್ರೀ ಶ್ರೀನಾಥ್ ಎ, ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಯಾದ ನಾನು ಆರೋಪಿಯಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆಃ*

ದಿನಾಂಕ 06.02.2026 ರಂದು ಸಮಯ ರಾತ್ರಿ 7.00 ಗಂಟೆಗೆ ಪೊನ್ನಂಪೇಟೆ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಪೊನ್ನಂಪೇಟೆ ಬಾಲಕಿಯರ ವಿದಾರ್ಥಿನಿ ನಿಲಯದ ಬಳಿ ರಸ್ತೆ ಬದಿಯಲ್ಲಿ ಆರೋಪಿಯಾದ ನೀವು ಸರ್ಕಾರದ ಯಾವುದೇ ಪರವಾನಗಿ ಇಲ್ಲದೆ ಅಕ್ರಮವಾಗಿ ಮಾದಕ ಪದಾರ್ಥವಾದ ಗಾಂಜಾವನ್ನು ಸಾರ್ವಜನಿಕ ಸ್ಥಳದಲ್ಲಿ ಸೇವನೆ ಮಾಡಿ ವಿಚಿತ್ರವಾಗಿ ಆಡುತ್ತಿರುತ್ತೀರಿ ಎಂಬುದಾಗಿರುತ್ತದೆ. ಅ ಮೂಲಕ ಆರೋಪಿಯಾದ ನೀವು Narcotic Drugs and Psychotropic Substances Act, 1985 27(b) ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

Sd/-

**ದಿನಾಂಕ 22.06.2026.** **ಸಿವಿಲ್ ನ್ಯಾಯಾಧೀಶರು ಮತ್ತು**
**ಸ್ಥಳ: ಪೊನ್ನಂಪೇಟೆ.** **ಪ್ರದನ್ಯಾದಂ,ಪೊನ್ನಂಪೇಟ**

## <u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.</u>

**<u>ಸಿ.ಸಿ.ನಂ.493/2026</u>**

**<u>ಪಿರ್ಯಾದಿ</u>** : ಕರ್ನಾಟಕ ಸರ್ಕಾರ,
ಪೊನ್ನಂಪೇಟೆ ಪೋಲೀಸ್,

**ವಿರುದ್ದ**

**<u>ಆರೋಪಿ</u>** : ಶ್ರೀ ಜಯಶೀಲನ್ ಸಿ,

**<u>ಭಾ.ನ್ಯಾ.ಸು.ಸಂಹಿತೆ ಕಲಂ 275 ರಡಿ ಆರೋಪಿಯ ಹೇಳಿಕೆ</u>**

ಪ್ರಶ್ನೆ.1:- ಇದೀಗ ಓದಿ ಹೇಳಿದ ಆರೋಪಣೆಯು ನಿನಗೆ ಅರ್ಥವಾಯಿತೆ?

ಉತ್ತರಃ ಅರ್ಥವಾಯಿತು.

ಪ್ರಶ್ನೆ.2:- ನೀನು ನಿನ್ನ ತಪ್ಪನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆ ಬಯಸುವೆಯಾ?

ಉತ್ತರಃ ತಪ್ಪಾಯಿತು, ದಂಡ ಕಟ್ಟುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ವಿವರಿಸಿದ ನಂತರ ಆತ ನೀಡಿದ ಉತ್ತರಗಳನ್ನು ನನ್ನಿಂದ ದಿಃ22.06.2026 ರಂದು ದಾಖಲೆ ಮಾಡಿಕೊಳ್ಳಲಾಯಿತು)

**Sd/-**

**ದಿನಾಂಕಃ22.06.2026**
**ಸ್ಥಳಃ ಪೊನ್ನಂಪೇಟೆ**

**ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರದನ್ಯಾದಂ, ಪೊನ್ನಂಪೇಟೆ**